32

**ಕರ್ನಾಟಕ ಸರ್ಕಾರ**
**ನೋಂದಣಿ ಮತ್ತು ಮುದ್ರಾಂಕ ಇಲಾಖೆ**

ಸಂಖ್ಯೆ: Comp: 9:03-04
ಅಡಕ:- 1

ನೋಂದಣಿ ಮಹಾಪರಿವೀಕ್ಷಕರು ಹಾಗೂ
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಾವೇರಿ ಭವನ, ಜಲಮಂಡಳಿ ಕಟ್ಟಡ,
7ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು.
ದಿನಾಂಕ: 29-8-2003.

**ಗಣಕೀಕರಣ**
**ಸುತ್ತೋಲೆ - 2**

ವಿಷಯ:- " ಕಾವೇರಿ " ಸಾಫ್ಟ್‌ವೇರ್ ಅನುಷ್ಠಾನಗೊಳಿಸುವಾಗ ಆಗುವ ಅಡೆತಡೆಗಳನ್ನು ಸರಿಪಡಿಸುವ ಕುರಿತು.

---

ಜಿಲ್ಲಾ ನೋಂದಣಾಧಿಕಾರಿಗಳ ಮೂಲಕ ಆಯಾ ಜಿಲ್ಲೆಯಲ್ಲಿರುವ ಎಲ್ಲಾ ಉಪ ನೋಂದಣಿ ಕಛೇರಿಗಳಿಗೆ ಸಂಬಂಧಿಸಿದಂತೆ " ಕಾವೇರಿ " ಸಾಫ್ಟ್‌ವೇರನ್ನು ತಲುಪಿಸಲಾಗಿದೆ.

C - DAC-Pune ಇವರು ಈ ಕಾವೇರಿ ಸಾಫ್ಟ್‌ವೇರ್ ಅನ್ನು ಸಮರ್ಥನೀಯವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು, ಕಾಲಕಾಲಕ್ಕೆ ಬೇಕಾದ ತಾಂತ್ರಿಕವಾಗಿ ಸಹಾಯವನ್ನು ಸದಾಕಾಲವು ಕೊಡಲು ಒಪ್ಪಿರುತ್ತಾರೆ.

ಕಾವೇರಿ ಸಾಫ್ಟ್‌ವೇರ್‌ದಲ್ಲಿ ದಸ್ತಾವೇಜುಗಳ ನೋಂದಣಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿ ಆಯಾ ಜಿಲ್ಲಾ ನೋಂದಣಾಧಿಕಾರಿ, ಉಪ ನೋಂದಣಾಧಿಕಾರಿ ಮತ್ತು ಎಲ್ಲಾ ಸಿಬ್ಬಂದಿಗಳ ಹೊಣೆಗಾರಿಕೆಯಾಗಿರುತ್ತದೆ.

ಈ ಕಾರ್ಯದ ಅನುಷ್ಠಾನದಲ್ಲಿ ಕಾವೇರಿ ಸಾಫ್ಟ್‌ವೇರ್‌ದಲ್ಲಿ " ಬಗ್ ಆಕರನ್ಸ್ " (Bug occurance) ಬರಬಹುದು. ಈ ತೊಂದರೆ ಯಾವ ಹಂತದಲ್ಲಿ ಆಗಿದೆ ಹಾಗೂ ಯಾವ ತೊಂದರೆ ಆಗಿದೆ ಎಂಬುದನ್ನು C - DAC Pune ಇವರಿಗೆ ತಿಳಿಸಲು ಹಾಗೂ ಅದನ್ನು ಸರಿಪಡಿಸಿಕೊಳ್ಳಲು ಅನುಕೂಲವಾಗುವಂತೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ನಮೂನೆಯ ರಿಜಿಸ್ಟರ್‌ನಲ್ಲಿ ಬರೆಯತಕ್ಕದ್ದು ಹಾಗೂ ಈ ವಿಷಯವನ್ನು ಅದೇ ನಮೂನೆಯಲ್ಲಿ C - DAC Pune ಇವರಿಗೆ E-mail ಮೂಲಕ ತಕ್ಷಣವೇ ತಿಳಿಸತಕ್ಕದ್ದು. ಈ ಕಾರ್ಯವನ್ನು ತಮ್ಮ ಜಿಲ್ಲೆಯ ಜಿಲ್ಲಾ ನೋಂದಣಾಧಿಕಾರಿ ಕಛೇರಿಯಲ್ಲಿರುವ ಕಂಪನಿಯ ಇಂಜಿನಿಯರ್ ಆಗಲಿ ಅಥವಾ ತಮ್ಮ ಕಛೇರಿಯ ಅಪರೇಟರ್ ಮೂಲಕ ಆಗಲಿ ಅಥವಾ ತಾವೇ ಸ್ವತಃ ಖುದ್ದಾಗಿ E-mail ಮೂಲಕ ಪುಣೆಗೆ ತಿಳಿಸತಕ್ಕದ್ದು. ಈ ತೊಂದರೆಯನ್ನು ನಿವಾರಣೆ ಮಾಡಿ ಪುಣೆಯಿಂದ ಕಳುಹಿಸುವ ಪ್ಯಾಚ್ಸ್‌ಗಳನ್ನು (Patches) ಉಪಯೋಗಿಸಿಕೊಂಡು ಈ ತೊಂದರೆಯನ್ನು ತಕ್ಷಣವೇ ನಿವಾರಿಸಿಕೊಳ್ಳತಕ್ಕದ್ದು.

ಈ ಕೆಲಸ ECIL / CMS ಕಂಪನಿಗೆ ಸಂಬಂದಪಟ್ಟದೆಂದು ಇಲಾಖೆಗೆ ಸಂಬಂಧಪಟ್ಟದಲ್ಲ ಎಂದು ತಪ್ಪಾಗಿ ಭಾವಿಸಿ ಸುಮ್ಮನೆ ಕೂರತಕ್ಕದ್ದಲ್ಲ. ಈ ಎಲ್ಲಾ ತೊಂದರೆಗಳ ನಿವಾರಣೆಯ ಜವಾಬ್ದಾರಿ ಉಪ ನೋಂದಣಾಧಿಕಾರಿಗಳದ್ದು, ತಮ್ಮ ಹಂತದಲ್ಲಿ ಈ ತೊಂದರೆಯನ್ನು C-DAC Pune ಯವರೊಂದಿಗೆ ಸಂಪರ್ಕಿಸಿದ ಮೇಲೂ ಆಗದಿದ್ದಲ್ಲಿ ತಕ್ಷಣವೇ ಜಿಲ್ಲಾ ನೋಂದಣಾಧಿಕಾರಿಗಳಿಗೆ ಹಾಗೂ ಈ ಕಛೇರಿಗೆ ವರದಿ ಮಾಡತಕ್ಕದ್ದು.

**C-DAC Pune ಅಧಿಕಾರಿಗಳ ಹೆಸರು ಹಾಗೂ E-mail ವಿಳಾಸಗಳು**

| ಕ್ರ.ಸಂ. | ಹೆಸರು | E-mail ವಿಳಾಸ |
|---|---|---|
| 1. | Shri. Mujib Shaikh, Team co-ordinator, ACTS, C-DAC, Pune, Plot No. 471, Amar House, Road 5A, Sindh Society, Banneru Road, Pune, Ph No. 020-5897568, 5883587 | **mujib@cdacindia.com** |
| 2. | Shri. Tushar Santh | **Tushars@cdacindia.com** |
| 3. | Shri. Jayanth Bahulekar | **Jayanatb@cdacindia.com** |
| 4. | Shri. Rajendra Mule | **Rajendram@cdacindia.com** |
| 5. | Shri. Praveen Patil | **Praveenp@cdacindia.com** |

(ಡಿ.ಸತ್ಯಮೂರ್ತಿ, I.A.S.,)
ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಪ್ರತಿಗಳನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಯವರಿಗೆ.
2. ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಯವರಿಗೆ
3. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ
4. ಗಾರ್ಡ್ ಫೈಲ್.
5. ಕಛೇರಿ ಕಡತಕ್ಕೆ.

**Government of Karnataka**
**Department of Registration and Stamps**

Register showing Bug and other difficulties noticed during implementation of KAVERI Application software in the Office of Sub-Registrar.....................................................Unit No.........................................District.................................

| Date & Time | Brief description of problem | Stage at which problem occurred | Software Application name, with screen title | Frequency of occurrence | Completion Status |
|---|---|---|---|---|---|
| 2 | 3 | 4 | 5 | 6 | 7 |
| | | | | | |

**Sub-Registrar**